# ಜೀವನ- ಸಂಗೀತ

ಒಳ್ಳೆಯ ಸಂಗೀತವನ್ನು ಆಲಿಸುವಾಗ ನಮ್ಮಲ್ಲಿ ಉಂಟಾಗುವ ವಿಶೇಷ ಭಾವೋದ್ದೀಪನವು ಅದರ ಜೊತೆಗೇ ಕೆಲವು ಪ್ರಶ್ನೆಗಳನ್ನೂ ಕೇಳುವಂತೆ ಮಾಡುತ್ತದೆ. ನಮ್ಮನ್ನೇ ನಾವು ಕೇಳಿಕೊಳ್ಳಬೇಕಾದ ಪ್ರಶ್ನೆಗಳು. ಇತರರನ್ನಲ್ಲ. ಆ ಪ್ರಶ್ನೆಗಳೆಂದರೆ – ಇದುವರೆಗೆ ಈ ಭಾವಗಳು, ಈ ಪುಲಕಗಳು, ಯಾವುದೋ ಗತ ಜನ್ಮದ ಮರುಕಳಿಸುವಂಥ ಕಲಕುಗಳು– ಕುಲುಕುಗಳು. ಈ ಅನ್ಯಥಾ ವೃತ್ತಿಗಳು, ಈ ಸುಮಧುರ ಯಾತನೆಗಳು. ಈ ದಿವ್ಯದ ಯಾಚನೆಗಳು. ಇವೆಲ್ಲ ಎಲ್ಲಿದ್ದವು? ನಮ್ಮೊಳಗೇ ಎಲ್ಲಿ ಅಡಗಿದ್ದವು? ಹೇಗೆ ಅಡಗಿದ್ದವು? ಅಡಗಿ ಇದ್ದಾಗಲೂ ಪ್ರಕಟಗೊಳ್ಳುವುದಕ್ಕೆ ಇವು ಹಂಬಲಿಸುತ್ತಿದ್ದುವೆ? ಒಂದೊಮ್ಮೆ ಈ ಬದುಕಿನಲ್ಲಿ ಸಂಗೀತವನ್ನು ಕೇಳಲು ಸಾಧ್ಯವಾಗದೆ ಇದ್ದರೆ ಇವು ಎಂದೆಂದೂ ಪ್ರಕಟಗೊಳ್ಳುವುದೇ ಇಲ್ಲವೆ? ಪ್ರಕಟಗೊಳ್ಳದೆ ಇದ್ದರೆ ಇವು ಇದ್ದುದೇ ತಿಳಿದು ಬರಲಾರದೆ? ಅಥವಾ ನಮ್ಮ ರಸಾನುಭವ ಸಾಮರ್ಥ್ಯವು ಬದುಕಿನಲ್ಲಿ ಒಂದಲ್ಲ ಒಂದು ರೂಪದಲ್ಲಿ ವ್ಯಕ್ತವಾಗಿಯೇ ಆಗುತ್ತದೆಯೆ? ವ್ಯಕ್ತವಾಗುತ್ತದೆ ಎಂದೊಪ್ಪಿಕೊಳ್ಳ ಬಯಸುತ್ತದೆ ನನ್ನ ಮನಸ್ಸು. ಅಂದರೆ ಎಲ್ಲವನ್ನೂ ರೂಪಾಂತರಗೊಳಿಸುತ್ತ ಹೋಗುವುದು ಬದುಕಿನ ಒಂದು ವಿಸ್ಮಯಾವಹ ಸಾಮರ್ಥ್ಯವಾಗಿದೆ. ಒಮ್ಮೆ ನಮ್ಮಲ್ಲಿ ಪ್ರಕಟಗೊಂಡ, ನಮ್ಮ ಪ್ರಜ್ಞೆಗೆ ತಿಳಿದು ಬಂದು ರೋಮಾಂಚನವನ್ನುಂಟು ಮಾಡಿದ ರಸಾನುಭವವು ಮತ್ತೆ ನಿಧಾನವಾಗಿ ಪ್ರಜ್ಞೆಯವರೆಗೆ ಸರಿದು ಜೀವನಾನುಭವದ ಒಳಕೋಣೆಯಲ್ಲಿ ಕೂಡುತ್ತದೆ. ಜೀವನಾನುಭವವೇ ಕಲೆಯಿಂದ ಉದ್ದೀಪನಗೊಳ್ಳುವ ರಸಾನುಭವವಾಗಿ, ರಸಾನುಭವವು ಮತ್ತೆ ಜೀವನಾನುಭವವಾಗಿ ರೂಪಾಂತರಗೊಳ್ಳುತ್ತ ಹೋಗುತ್ತದೆ. ಕಲಾನುಭವವನ್ನು ಪಡೆಯಲು ಅಂದರೆ ಕಲಾವಿದರಾಗಿ ರೂಪುಗೊಳ್ಳಲು ತಕ್ಕ ತರಬೇತಿ ಬೇಕು. ಮಾಧ್ಯಮದ ಕುರಿತಾದ ಸೂಕ್ಷ್ಮ ಅರಿವು ಬೇಕು ನಿಜ. ಜೀವನಾನುಭವಕ್ಕೇನು ಬೇಕು? ಬದುಕು ತಂದೊಡ್ಡುವ ಸೂಕ್ಷ್ಮವಾದ ಸಮಸ್ಯೆಗಳ ಬಗ್ಗೆ ಅಂತಃಕರಣವು ಸಂವೇದನಾಶೀಲವಾಗಿರಬೇಕು. ಬದುಕಿನ ನಾನಾ ಮುಖದ ಸಮಸ್ಯೆಗಳ ಸುತ್ತ ಅಂತಃಕರಣವು ತನ್ನಲ್ಲಿಯೇ ಹೋರಾಡದೆ ಇದ್ದರೆ ದೊಡ್ಡದೊಂದು ಬದುಕಿನ ಅನುಭವವೇ ಉಂಟಾಗಲಾರದು. ಕೆಲವು ಸುಖಾಪೇಕ್ಷಿಗಳಾದ ಮನಸ್ಸುಗಳಿಗೆ ಬದುಕಿನ ಈ ಒಳ ಅನುಭವಗಳೇ ಇಲ್ಲದೆ ಅದರಿಂದ ರಸಾನುಭವ ಸಾಮರ್ಥ್ಯವು ಆಃಳವಾಗಲಾರದು.

ರಾಮಾಯಣವನ್ನು ನೋಡಿ. ಅಲ್ಲೊಂದು ಆಶ್ಚರ್ಯವಿದೆ. ವಾಕ್ಯವಿಶಾರದನಾದ, ಛಂದೋವಿದನಾದ, ಸಂಗೀತವನ್ನು ಬಲ್ಲವನಾಗಿ ಮೂರ್ಛನಾಸ್ಥಾನಕೋವಿದನಾದ (ಈ ವಿಶೇಷಣಗಳೆಲ್ಲವೂ ಆದಿ ಕಾವ್ಯದ್ದೇ) ವಾಲ್ಮಿಕಿಗೆ ಬದುಕಿಗೆ ಸಂಬಂಧಿಸಿದಂತೆ ದೊಡ್ಡ ಪ್ರಶ್ನೆಯೊಂದು ಕಾಡುತ್ತಿತ್ತು. ಈಗಣ ಕಾಲದಲ್ಲಿ ಈ ಲೋಕದಲ್ಲಿ ಯಾರು ನಿಜಕ್ಕೂ ಒಳ್ಳೆಯವನು ಎಂಬ ಪ್ರಶ್ನೆ. 'ಗುಣವಾನ್ ಕಃ' ಎಂಬ ಪ್ರಶ್ನೆ. ತಾನು ನೋಡಿದ ತನಗೆ ಬದುಕು ತಂದೊಡ್ಡಿದ ಈ ತೀಕ್ಷ್ಣವಾದ ಪ್ರಶ್ನೆಯಿಂದ ಕಾಡಿಸಿಕೊಳ್ಳುವುದು ವಾಲ್ಮೀಕಿಯ ಭಾಗ್ಯವಾಗಿತ್ತು! ಪ್ರಶ್ನೆಗೆ ಉತ್ತರವಾಗಿ ರಾಮನ ಕಥೆಯನ್ನು ನಾರದನಿಂದ ವಾಲ್ಮೀಕಿ ಕೇಳಿದನು. ತನ್ಮಯನಾಗಿ ಕೇಳಿದ್ದರಿಂದ ರಸಾನುಭವದಿಂದಾಗಿಯೇ ಉಂಟಾಗತಕ್ಕ ಸೃಷ್ಟಿಶೀಲವಾದ ಅಂತರಿಕ್ಷಕ್ಷೋಭೆಯೊಂದು ವಾಲ್ಮೀಕಿಯಲ್ಲಿ ಉಂಟಾಯಿತು. ನಿಂತಲ್ಲಿ ನಿಲ್ಲಲಾರದೆ ಬಳಿಯ ಕಾಡಿನಲ್ಲಿ ಸುತ್ತಾಡಿದನು. ಕೊಂಬೆಯೊಂದರಲ್ಲಿ ಎರಡು ಹಕ್ಕಿಗಳು ಜತೆಯಲ್ಲಿರುವುದನ್ನು ಕಂಡನು. ಸಂತಸವಾಯಿತು. ನೋಡುತ್ತಿದ್ದಂತೆ ಬಾಣವೊಂದು ಎರಗಿ ಬಂದು ಗಂಡು ಹಕ್ಕಿ ಸತ್ತು ಉರುಳಿ ಹೆಣ್ಣು ಹೃದಯವಿದ್ರಾವಕವಾಗಿ ಚೀರಿತು. ವಾಲ್ಮೀಕಿಗೆ ಕರುಣೆಯ ಆಘಾತ ಬಂದೆರಗಿತು. ಇದ್ದಕಿದ್ದಂತೆ ಉದ್ಗಾರವೊಂದು ಅವನಿಂದ ಹೊಮ್ಮಿಬಂತು. ಜತೆಯ ಹಕ್ಕಿಯಲ್ಲಿ ಒಂದನ್ನು ಕೊಂದೆಯಲ್ಲ, ನೀನೇನು ಚಿರಂಜಿವಿಯೆ? ಎಂಬರ್ಥದ ಉದ್ಗಾರವದು!

ಮತ್ತೆ ನೋಡಿದರೆ ಆ ಉದ್ಗಾರ, ಛಂದೋಬದ್ಧವಾಗಿ, ಲಯಬದ್ಧವಾಗಿ ಇತ್ತು! ಹಾಡುವುದಕ್ಕೆ ಯೋಗ್ಯವಾಗಿ ಇತ್ತು. ಅಂದರೆ ಆ ಉದ್ಗಾರವೊಂದು 'ವಾಗ್ಗೇ'ಯ ಕೃತಿಯಾಗಿತ್ತು!

ಈ ಕಥೆ ಎಲ್ಲರಿಗೂ ಗೊತ್ತಿರುವುದೇ. ಪ್ರಶ್ನೆ ಏನೆಂದರೆ, ವಾಲ್ಮೀಕಿಯಲ್ಲಿ ಯಾರು ಈ ಲೋಕದಲ್ಲಿ ನಿಜವಾಗಿ ಗುಣ ಶಾಲಿ? ಎನ್ನುವ ಗಾಢವಾದ ಪ್ರಶ್ನೆ ಹುಟ್ಟಿರದಿದ್ದರೆ, ಈ ಪ್ರಶ್ನೆಯ ಹಿನ್ನೆಲೆ ಕವಿಯ ಮನದಲ್ಲಿ ಇದ್ದಿರದಿದ್ದರೆ ಕ್ರೌಂಚದ ದುರಂತವನ್ನು ಕಂಡಾಗ ಅಂಥದೊಂದು ಉದ್ಗಾರ ಅಪ್ರಯತ್ನದಿಂದೆಂಬಂತೆ ಹೊಮ್ಮಿ ಬರುತ್ತಿತ್ತೆ? ಎನ್ನುವುದು. ಒಂದು ಪ್ರಶ್ನೆ– 'ಒಂದು ಉದ್ಗಾರ ಸದಾ ಜೊತೆಗಿವೆ– ಎರಡು ಹಕ್ಕಿಗಳಂತೆ ಯಾವ ಬೇಡನ ಯಾವ ಚಾಣಕ್ಕೂ ಇವಗಳನ್ನು ಬೇರ್ಪಡಿಸಲಾಗದು! 'ಪ್ರಶ್ನೆ' ಎಂದರೆ ಬದುಕಿನ ಅನುಭವಗಳ ಪ್ರತಿಫಲನ. 'ಉದ್ಗಾರ'ವೆಂದರೆ ತತ್‌ಕ್ಷಣದ ಸಾಂದರ್ಭಿಕ ಮನೋಧರ್ಮ. 'ಪ್ರಶ್ನೆ'ಯು ಜೀವನಾನುಭವ.'ಉದ್ಗಾ'ರ ಕಲೆಯ ಅನುಭವ. ಇವೆರಡಕ್ಕೂ ನಿಕಟ ಸಂಬಂಧ. ಈ ಸಂಬಂಧದ ಗಾಢತೆ ಕಳೆದು ಹೋದರೆ, ಸಂಬಂಧವು ತೆಳ್ಳಗಾಗುತ್ತ ಹೋದರೆ, 'ಬದುಕು' ಮತ್ತು 'ಕಲೆ' ಎರಡೂ ಸೊರಗುವುದು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ– ದೊಡ್ಡ ಹೋರಾಟವೊಂದರ ಹಿನ್ನೆಲೆ ಇರುವ ಬದುಕಿನಿಂದ ಕಲೆಯ ಅನುಭವ ಪರಿಪಕ್ವವಾಗುವುದು. ದೊಡ್ಡ ಹೋರಾಟದ ಅಭಾವದಿಂದ ಬದುಕು ಮಾತ್ರವಲ್ಲ ಕಲೆಯೂ ಸೊರಗುವುದು.

ಆಲಾಪನೆಯಲ್ಲಿ ರಾಗವನ್ನು ವಿಸ್ತರಿಸುವ ಪ್ರಕ್ರಿಯೆಯನ್ನು ನೋಡಿ. ರಾಗವನ್ನು ದೊಡ್ಡದಾಗಿ ವಿಸ್ತರಿಸಬೇಕಿದ್ದರೆ ಬದುಕಿನ ಅನುಭವಗಳು ಭಾವಗಳಾಗಿ, ಮೂಲದ್ರವ್ಯವಾಗಿ ಒದಗಬೇಕು. ಕಲಾವಿದನ ಅಂತರಂಗಕ್ಕೆ ಕೇವಲ ರಾಗದ ತಾಂತ್ರಿಕ ಅರಿವಲ್ಲ. ರಾಗ ವಿಸ್ತಾರವೆಂದರೆ ರಾಗದ ಉಬ್ಬಾಳುತನವಲ್ಲ. ಅದಿ ಒಂದು ಬಿಂದುವನ್ನು ಒಳಗಿನಿಂದಲೇ ಊದಿ ಊದಿ ಬಲೂನು ಮಾಡುವಂತೆ– ಅಲ್ಲ. ಬಲೂನು ದೊಡ್ಡದಾಗಿ ಕಾಣಬಹುದು. ಆಕರ್ಷಕವೂ ಆಗಿರಬಹುದು. ಆದರೆ ಬಿಂದುವಿನ ಸಾಂದ್ರತೆ ಬಲೂನಿನಲ್ಲಿ ಇಲ್ಲ. ಕಲೆ ಎಂದರೆ ಬಿಂದು ಬಲೂನಾಗುವುದಲ್ಲ. ಕಲೆ ಎಂದರೆ ಬಿಂದು, ತನ್ನ ಸಾಂದ್ರತೆಯನ್ನು ಕಳೆದುಕೊಳ್ಳದೆ ಸಾಧ್ಯವಾದರೆ ಸಿಂಧುವಾಗುವುದು ಅಥವಾ ಆ ದಾರಿಯಲ್ಲಿ ಸಾಗುವುದು. ಒಂದು ಭಾವವನ್ನು ಮತ್ತೆ ಮತ್ತೆ ಮೀಟುತ್ತಿದ್ದರೆ ಅದು ಸ್ವಾನುಕಂಪಕ್ಕಾಗಿ ಉಂಟು ಮಾಡುವ ಪ್ರಜ್ಞಾಪೂರ್ವಕ ಪ್ರಯತ್ನವಾಗಿಯೂ ಭಾಸವಾಗಬಹುದು. ಇಂಥ ಕಡೆ ಕಲೆ ಸೋಲುತ್ತದೆ. ಕಲೆ ಸೋತಾಗಲೆಲ್ಲ ಅದು ಸೋಲಿನ ಅರಿವಿನಿಂದ ಕಂಗೆಟ್ಟು ಮತ್ತೆ ಕಳೆದು ಹೋದ ಜೀವಂತಿಕೆಯನ್ನು ಪಡೆಯುವುದಕ್ಕಾಗಿ ಕಲೆಯು ಬದುಕಿನತ್ತ ನೋಡಲೇ ಬೇಕಾಗುತ್ತದೆ.

ಒಮ್ಮೆ ಸಂಗೀತ ಕಲಾನಿಧಿ ಟಿ.ವಿ. ಶಂಕರ ನಾರಾಯಣನ್ ಅವರ ಗಾಯನವನ್ನು ಕೇಳುತ್ತಿದ್ದಾಗ ನನಗೆ ಈ ಭಾವ ಹೊಳೆಯಿತು. ಅವರ ಸಂಗೀತದಲ್ಲಿ ಭಾವವಿತ್ತು. ಭಾವದಲ್ಲಿ ವೀರರಸವಿತ್ತು. ಕರುಣ ರಸವೂ ಇತ್ತು. ಆದರೆ ಕರುಣವನ್ನು ಮತ್ತೆ ಮತ್ತೆ ಮೀಟುತ್ತಿರಲಿಲ್ಲ. ಇತರ ಭಾವಗಳನ್ನು ಸ್ಪರ್ಶಿಸುತ್ತಿದ್ದರು. ಅದು ಬರಿಯ ಮೆಲೊಡಿಯನ್ನು ಮಾತ್ರ ಉದ್ದೇಶಿಸಿದ ಸಂಗೀತವಾಗಿರಲಿಲ್ಲ. ಅದೊಂದು ಎದೆಗಾರಿಕೆಯ ಸಂಗೀತವಾಗಿತ್ತು. ಬದುಕಿನ ಗಾಢ ಅನುಭವಗಳಿಗೆ ಕಲಾವಿದರು ಪ್ರಾಮಾಣಿಕವಾಗಿದ್ದರೆ ಕಲೆಯು ಪಡೆಯಬಹುದಾದ ಆಳ ಬೇರೆ ಎನಿಸುತ್ತದೆ. ಈ ಅರ್ಥದಲ್ಲಿ ಕಲೆ– ಬದುಕಿಗೆ ಅತ್ಯಂತ ಕೃತಜ್ಞವಾಗಿರುತ್ತದೆ ಮತ್ತು ತಾನೇಕೆ ಕೃತಜ್ಞವಾಗಿರಬೇಕು ಎಂದು ಕಲೆಗೆ– ಕಲೆಗೆ ಮಾತ್ರ– ಚೆನ್ನಾಗಿ ಗೊತ್ತಿರುತ್ತದೆ.

–ತೋಪ

## ಮಾತೇ ಮುತ್ತು

★ ನಮಗೆ ನಾವೇ ಮಿತಿ ಹಾಕಿಕೊಂಡಾಗ ಅದನ್ನು ದುರದೃಷ್ಟವೆಂದು ಕರೆಯುತ್ತೇವೆ.

–ರಾಲ್ಫ್ ಎಮರ್ಸನ್

★ ಉತ್ಸಾಹವೆಂಬುದು ಕಲ್ಲಿದ್ದಲ ಒಳಗೆ ಕುದಿಯುತ್ತಿರುವ ಕಾವಾಗಬೇಕೇ ವಿನಃ ಹುಲ್ಲಿಗೆ ಹತ್ತಿದ ಬೆಂಕಿಯಾಗಬಾರದು.

–ಕುವೆಂಪು

★ ಪ್ರಾರ್ಥನೆಯಲ್ಲಿ ಬರಿಯ ಮಾತುಗಳೇ ತುಂಬಿದ್ದು ಹೃದಯವಿಲ್ಲದೆ ಇರುವುದಕ್ಕಿಂತ, ಬರಿಯ ಹೃದಯವೇ ತುಂಬಿದ್ದು ಮಾತುಗಳಿಲ್ಲದೆ ಇರುವುದು ಮೇಲು!

–ಮಹಾತ್ಮ ಗಾಂಧಿ

★ ಗೆಳೆತನ ಎನ್ನುವುದು ಪ್ರೇಮಕ್ಕಿಂತ ಹೆಚ್ಚು ದುರಂತಮಯ. ಏಕೆಂದರೆ ಅದು ಹೆಚ್ಚು ಕಾಲ ಬಾಳುತ್ತದೆ.

–ಆಸ್ಕರ್ ವೈಲ್ಡ್

★ ಅಂಧಕಾರವನ್ನು ಹೋಗಲಾಡಿಸುವವನೇ ಗುರು.

–ಮಹಾಕವಿ ಕಾಳಿದಾಸ